ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಪ್ರಾಥಮಿಕ ಶಾಲೆಗಳಲ್ಲಿ ಸಾಕಷ್ಟು ಅಧ್ಯಾಪಕರುಗಳಿಲ್ಲದ ಬಗ್ಗೆ

೭೩. ಶ್ರೀ ಬಿ. ಎಂ. ಇದ್ದಿನಬ್ಬ (ಉಳ್ಳಾಲ).— ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಮಾನ್ಯ ಶಿಕ್ಷಣ ಸಚಿವರು ಉತ್ತರಿಸುವರೆ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಪ್ರಾಥಮಿಕ ಶಾಲೆಗಳಲ್ಲಿ ಸಾಕಷ್ಟು ಅಧ್ಯಾಪಕರು ಗಳಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಅವರ ಕೊರತೆ ಇರುವ ಒಟ್ಟು ಸಂಖ್ಯೆ ಎಷ್ಟು ?

ಆ) ಉಳ್ಳಾಲ ಕ್ಷೇತ್ರದ ಬಜಾಲ ನಂತೂರು, ಸೋಮೇಶ್ವರ, ಉಚ್ಚಿಲಗುಡ್ಡೆ, ಉಳ್ಳಾಲ ಬೋರ್ಡ್ ಶಾಲೆಗಳಲ್ಲಿ ಅಧ್ಯಾಪಕರ ಕೊರತೆಯಿಂದ ವಿದ್ಯಾಭ್ಯಾಸ ನಡೆಯದೇ ಅನಾನುಕೂಲ ಆಗಿರು ವುದನ್ನು ನೀಗಿಸಲಾಗುವುದೇ ? ಹಾಗಿದ್ದಲ್ಲಿ ಯಾವಾಗ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಆ) ಹೌದು. ಕೊರತೆಯಿರುವ ಶಿಕ್ಷಕರ ಸಂಖ್ಯೆ. ೧೫೨.

ಆ) ಆತಿ ಶೀಘ್ರದಲ್ಲಿಯೇ ಜಿಲ್ಲಾ ನೇಮಕಾತಿ ಸಮಿತಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಈ ಕೊರತೆಯನ್ನು ನೀಗಿಸಲಾಗುವುದು.

ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ಈಗ ದೇಶದಲ್ಲಿ, ರಾಜ್ಯದಲ್ಲಿ ಬಹಳ ದೊಡ್ಡ ಪ್ರಚಾರ ಏನೆಂದರೆ ವಿದ್ಯಾಭ್ಯಾಸದಲ್ಲಿ ಎಲ್ಲರೂ ಮುಂದೆ ಬರಬೇಕೆನ್ನುವುದು ಆಗಿದೆ. ರಾಜ್ಯದ ಬಜೆಟ್ಟಿನ ಅರ್ಧ ಭಾಗದ ಹಣವನ್ನು ವಿದ್ಯಾಭ್ಯಾಸಕ್ಕೆ ಖರ್ಚು ಮಾಡಲಾಗುತ್ತಿದೆ. ೫ ವರ್ಷ ೮ ತಿಂಗಳು ತುಂಬಿದ ಯಾವ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಬಾರದು ಎನ್ನುವುದು ಸರ್ಕಾರದ ಉದ್ದೇಶವಾಗಿದೆ, ಆದರೆ, ೧೦೦-೧೫೦ ಹುಡುಗರಿಗೆ ಒಬ್ಬರು ಉಪಾಧ್ಯಾಯರು ಇಲ್ಲದೇ ಹೋದರೆ, ಯಾವ ರೀತಿ ವಿದ್ಯಾಭ್ಯಾಸ ಕೊಡುವುದಕ್ಕಾಗುತ್ತದೆ ? ಒಂದು ಕಡೆ ಶಾಲಾಕಟ್ಟಡ ಮತ್ತೊಂದು ಕಡೆ ಅಧ್ಯಾಪಕರು ಇಲ್ಲದೇ ಹೋದರೆ, ವಿದ್ಯಾಭ್ಯಾಸ ಹೇಗೆ ನಡೆಯುತ್ತದೆ ?

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಜೆಟ್ಟಿನ ಅರ್ಧ ಭಾಗದಷ್ಟು ಹಣವನ್ನು ಸಮ್ಮ ಇಲಾಖೆಗೆ ಖರ್ಚು ಮಾಡುತ್ತಿದ್ದೇವೆಂದು ಹೇಳಿದರು ಆದರೆ ೧೮ ಪರ್ಸೆಂಟ್‌ನಷ್ಟು ಮಾತ್ರ ಖರ್ಚು ಮಾಡುತ್ತಿದ್ದೇವೆ. ಹಣದ ಕೊರತೆಯಿಂದಲೇ ತೊಂದರೆಯಾಗಿದೆ. ಸಾಮಾನ್ಯವಾಗಿ ಎಲ್ಲಾ ಶಾಲೆಗಳಿಗೂ ಉಪಾಧ್ಯಾಯರನ್ನು ನೇಮಿಸಲಾಗಿದೆ. ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿರುವ ಕಡೆ ಉಪಾಧ್ಯಾಯರುಗಳನ್ನು ನೇಮಿಸಬೇಕಾಗಿದೆ. ಈಗ ಸರ್ಕಾರಕ್ಕೆ ಪ್ರೊಪೋಸಲ್ ಬಂದಿದ್ದು, ಹೊಸದಾಗಿ ೮,೦೦೦ ಜನ ಉಪಾಧ್ಯಾಯರು ಬೇಕಾಗಿದೆ. ಇನ್ನು ೨-೩ ತಿಂಗಳಲ್ಲಿ ನೇಮಕಾತಿ ಕೆಲಸ ವನ್ನು ಮುಗಿಸಲಾಗುವುದು. ಉಪಾಧ್ಯಾಯರ ಕೊರತೆ ಇರುವ ಕಡೆ, ಹೆಚ್ಚಿಗೆ ಉಪಾಧ್ಯಾಯರು ಇರುವ ಜಾಗಗಳಿಂದ ಉಪಾಧ್ಯಾಯರುಗಳನ್ನು ಹಾಕಿ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳ ಬೇಕೆಂದು ಸೂಚಿಸಲಾಗಿದೆ, ಸೌತ್ ಕೆನರಾವಲ್ಲಿ ಅಷ್ಟು ತೊಂದರೆಯಾಗಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ವಿದ್ಯಾರ್ಥಿಗಳ ಲೆಕ್ಕದ ಪ್ರಕಾರ ಎಷ್ಟು ಕೊರತೆ ಇದೆ ? ಇಪತ್ತು ಮಂಡಿಕೆಯಲ್ಲಿ ತೂತು ತೆಗೆದು ನೀರು ಹಾಕಿದಂತಾಗಿದೆ. ಸೋಮೇಶ್ವರ ಗುಡಿಯಲ್ಲಿ ಅಧ್ಯಾಪಕರ ಕೊರತೆ ಇದೆ.

ಶ್ರೀ ಡಿ. ಮಂಜುನಾಥ್.—ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ, ಸೌತ್ ಕೆನರಾದಲ್ಲಿ ಚೆನ್ನಾಗಿದೆ. ಆದರೂ ಕೊರತೆಯನ್ನು ತುಂಬುವುದಕ್ಕೆ ಪ್ರಯತ್ನ ಮಾಡಲಾಗುವುದು.

ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಶಾಲೆಗಳ ಬಗ್ಗೆ

೧೭೩. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಉಡುಪಿ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ೧೯೮೬-೮೭ನೇ ಸಾಲಿನಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು,)